ಆ) ಧಾರವಾಡ ತಾಲ್ಲೂಕಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ರೈತರ ಮಾಹಿತಿ ಇದೆಯೇ; ಇದ್ದರೆ, ಮಾಹಿತಿ ಯಾವ ರೀತಿ ಪಡೆಯಲಾಗಿದೆ;

ಇ) ಧಾರವಾಡ ನಗರದ ಮಧ್ಯವರ್ತಿ ಮಾರುಕಟ್ಟೆಯಲ್ಲಿ ಸಂತೆ ನಡೆಸಲು ನಗರ ವಾಹನ ನಿಲ್ದಾಣ ಪಡೆದರೆ ಸೂಕ್ತ ಆಗಬಹುದೇ; ಅಥವಾ ಬೇರೆ ಯವ ಸ್ಥಳ ಪಡೆಯಲಾಗುವುದು;

ಈ) ನಗರದ ಮಧ್ಯದಲ್ಲಿ ಸಂಪರ್ಕ ಸ್ಥಳಗಳಲ್ಲಿ ಸರ್ಕಾರದ ನಿವೇಶನಗಳು ಇರುವುದನ್ನು ಗುರುತಿಸಿ ರೈತ ಸಂತೆ ಪ್ರಾರಂಬಿಸಲಾಗುವುದೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು, ರೈತರ ಸಂತೆಯನ್ನು ಸ್ಥಾಪಿಸುವ ಬಗ್ಗೆ ಸಮೀಕ್ಷೆ ವರದಿ ನೀಡಲು ಧಾರವಾಡ ಕೃಷಿ ವಿಶ್ವವಿದ್ಯಾಲಯ ಇವರನ್ನು ಕೋರಲಾಗಿದೆ. ಸಮೀಕ್ಷೆ ವರದಿ ಪರಿಶೀಲಿಸಿ ರೈತರ ಸಂತೆ ಸ್ಥಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯಲ್ಲಿ ಈ ಮಾಹಿತಿಯನ್ನು ಪಡೆಯಲಾಗುವುದು.

ಇ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯನ್ನು ಆದರಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಈ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯನ್ನು ಆದರಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಕೂಡಲ ಸಂಗಮದ ಜಲಾನಯನ ಪ್ರದೇಶದ ಬಸವಸಾಗರದಲ್ಲಿ ಮೊಸಳೆಗಳ ಹಾವಳಿ

4209 (4839) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ)ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೂಡಲಸಂಗಮದ ಜಲಾನಯನ ಪ್ರದೇಶ ಬಸವಸಾಗರವೆಂದು ನಾಮಕರಣವಾದ ಮೇಲೆ ಆ ಪ್ರಕಾರ ದಾಖಲೆಗಳಲ್ಲಿ ಎಂದು ನಮೂದಿಸಲಾಗಿದೆ; ಹಾಗಿದ್ದಲ್ಲಿ ಅದರ ಸುತ್ತಲೂ ನಾಮಫಲಕಗಳನ್ನು ಯಾಕೆ ನಿರ್ಮಿಸಿರುವುದಿಲ್ಲ?

ಆ)ಬಸವಸಾಗರದ ಜಲಾನಯನ ಪ್ರದೇಶದಲ್ಲಿ ಮೊಸಳೆಗಳು ಇರುವುದು ನಿಜವೇ; ಅದರಲ್ಲಿ ಈವರೆಗೆ ಎಷ್ಟು ಜನರ ಜೀವ ಆಹುತಿಯಾಗಿದೆ; ಆಹುತಿಯಾದ ಸಂಖ್ಯೆ ವಿವರ ನೀಡುವುದು;

ಇ) ಕೂಡಲಸಂಗಮ ಈಗ ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಿದೆ ಪವಿತ್ರವಾದ ಬಸವಸಾಗರ ನೀರಿನಲ್ಲಿ ಸ್ನಾನ ಮಾಡಲು ನೀರಿನ ಸುತ್ತಲೂ ಮೆಟ್ಟಿಲುಗಳ ಕಟ್ಟೆಗಳನ್ನು ನಿರ್ಮಿಸುವುದು ಅವಶ್ಯಕವಲ್ಲವೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) 1982–83 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯವನ್ನು "ಬಸವ ಸಾಗರ" ಎಂದು ನಾಮಕರಣ ಮಾಡಲಾಗಿದ್ದು, ಈ ಜಲಾಶಯದ ಮೇಲೆ ಮತ್ತು ಜಲಾಶಯಕ್ಕೆ ಬರುವ ಕೂಡು ರಸ್ತೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ನಾಮಫಲಕಗಳನ್ನು ನಿರ್ಮಿಸಲಾಗಿದೆ.

"ಬಸವ ಸಾಗರ" ಕ್ಷೇತ್ರದ ಉದ್ದ 60 ಕಿ.ಮೀ. ಅಗಲ 4 ರಿಂದ 5 ಕಿ.ಮೀ ಇರುವುದರಿಂದ ಇಷ್ಟು ದೊಡ್ಡ ಕ್ಷೇತ್ರದ ಸುತ್ತಲು ನಾಮಫಲಕಗಳನ್ನು ನಿರ್ಮಿಸಲು ಕಷ್ಟವಾಗಿರುತ್ತದೆ. ಆದರೆ 4 ರಿಂದ 5 ಸ್ಥಳಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ನಾಮಫಲಕಗಳನ್ನು ಅಳವಡಿಸಲಾಗಿದೆ.

ಆ) ಬಸವಸಾಗರದ ಮೊಸಳೆಗಳು ಇರುವ ಸಂಗತಿ ನಿಜ. ಪ್ರತಿ ವರ್ಷ 4 ರಿಂದ 5 ಪ್ರಕರಣಗಳಲ್ಲಿ ಜೀವ ಆಹುತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತವೆ. ಆದರೆ ಅವೆಲ್ಲ ಮೊಸಳೆಯಿಂದ ಆಹುತಿಯಾಗಿರುವುದೆಂದು ನಿಶ್ಚಯಿಸುವುದು ಕಷ್ಟ ಸಾಧ್ಯ.

ಇ) ಪವಿತ್ರವಾದ ಬಸವ ಸಾಗರದ ನೀರಿನಲ್ಲಿ ಸ್ನಾನ ಮಾಡಲು ಸುತ್ತಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

ಮಾರುಕಟ್ಟೆಗಳಿಗೆ ಬರುತ್ತಿರುವ ಕೃಷಿ ಉತ್ಪನ್ನಗಳ ಪ್ರಮಾಣದ ಬಗ್ಗೆ

4210 (4924) : ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾರುಕಟ್ಟೆಯ ನಿರ್ಮಾಣದ ಮುಖ್ಯ ಉದ್ದೇಶ ಏನು;

ಆ) ರಾಜ್ಯದ ಮಾರುಕಟ್ಟೆಗಳ ಜಿಲ್ಲಾವಾರು ವಿವರ ನೀಡುವುದು; ಪ್ರತಿ ಮಾರುಕಟ್ಟೆಗಳಲ್ಲಿ ರೈತರ ಕೃಷಿ ಮತ್ತು ತೋಟಗಾರಿಕಾ ಪ್ರಮುಖವಾದ ಬೆಳೆಗಳು ಆವಕ ಆಗುತ್ತಿರುವ ಪ್ರಮಾಣದ ವಿವರ ನೀಡುವುದು;

ಇ) ಪ್ರತಿ ಮಾರುಕಟ್ಟೆಗಳಿಗೆ ಬರುತ್ತಿರುವ ಸುತ್ತಲಿನ ಪ್ರದೇಶದ ಹುಟ್ಟುವಳಿಗಳ ಪ್ರಮಾಣ ಎಷ್ಟು; ಪೂರ್ಣ ಪ್ರಮಾಣದ ಹುಟ್ಟುವಳಿ ಮಾರುಕಟ್ಟೆಗೆ ಬರುವಂತೆ ಯಾವ ಕ್ರಮ ಸರ್ಕಾರ ತೆಗೆದುಕೊಳ್ಳಲಬೇಕಾಗಿದೆ?

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) (ಕೃಷಿ ಮರುಕಟ್ಟೆ ಸಚಿವರು)

ಅ) ರೈತರು ಬೆಳೆದ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಸೌಲಭ್ಯಗಳನ್ನು ಒದಗಿಸಿ ಸ್ಪರ್ಧಾತ್ಮಕ ಧಾರಣೆ ದೊರೆಯುವಂತೆ ಮಾಡುವುದು ಹಾಗೂ ವ್ಯವಹಾರ ನಿಯಂತ್ರಣವು ಮಾರುಕಟ್ಟೆಯ ನಿರ್ಮಾಣದ ಮುಖ್ಯ ಉದ್ದೇಶವಾಗಿರುತ್ತದೆ.

ಆ) ವಿವರ ಅನುಬಂಧ – 1 ಮತ್ತು 2 ರಲ್ಲಿ ನೀಡಿದೆ.

ಇ) ರೈತರು ತಮ್ಮ ಉತ್ಪನ್ನಗಳನ್ನು ಮಾರಾಟಕ್ಕಾಗಿ ಯಾವುದೇ ಮಾರುಕಟ್ಟೆಗೆ ಕೊಂಡೊಯ್ಯಲು ಸ್ವತಂತ್ರರಿದ್ದು, ಯವುದೇ ನಿರ್ಭಂದವಿರುವುದಿಲ್ಲ. ಸಾಮಾನ್ಯವಾಗಿ ಮಾರುಕಟ್ಟೆ ಕ್ಷೇತ್ರದಲ್ಲಿ ಬೆಳೆಯುವ ಹುಟ್ಟುವಳಿಗಳು ಮಾರಾಟಕ್ಕಾಗಿ ಹತ್ತಿರದ ಮಾರುಕಟ್ಟೆಗೆ ಅವಕಾಶವಾಗುತ್ತವೆ. ಉಳಿದಂತೆ ಬೇಡಿಕೆ ಪೂರೈಕೆ, ಉತ್ತಮ ಧಾರಣೆ ಅಂಶ ಆಧರಿಸಿ ದೂರದ ಮಾರುಕಟ್ಟೆಗಳಿಗೂ ಸಹ ರೈತರು ಉತ್ಪನ್ನಗಳನ್ನು ಕೊಂಡೊಯ್ಯುತ್ತಾರೆ.

ರಾಜ್ಯದಲ್ಲಿ ಈಗಾಗಲೇ 144 ಕೃಷಿ ಉತ್ಪನ್ನ ಮರುಕಟ್ಟೆ ಸಮಿಗಳನ್ನು ಸ್ಥಾಪಿಸಿದ್ದು, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಜರುಗಿಸಲಾಗಿದೆ. ನೇರ ಮಾರಾಟ ವ್ಯವಸ್ಥೆಯ ರೈತರ ಸಂತೆಗಳನ್ನು ರಾಜ್ಯದಲ್ಲಿನ ಎಲ್ಲಾ ತಾಲ್ಲೂಕು ಕೆಂದ್ರಗಳಲ್ಲಿ ಸ್ಥಾಪಿಸುವ ಉದ್ದೇಶ ಹೊಂದಿದ್ದು, ಈ ಬಗ್ಗೆ ಸಮೀಕ್ಷಾ ಕಾರ್ಯ ನಡೆಸಲಾಗುತ್ತಿದೆ.